‘ಆ ಲೂಸಿಯೇ, ತನ್ನ ಸಾವಿನಿಂದ ಈ ಬಿಜುವಿಗೆ ಒಂದು ಪಾಠ ಕಲಿಸುತ್ತೇನೆ ಅಂತ, ನಿಮಗೆಲ್ಲಾ ಅನುಮಾನ ಬರುವ ವಾತಾವರಣ ಸೃಷ್ಟಿಸಿ, ತಾನೇ ಆತ್ಮಹತ್ಯೆ ಯಾಕೆ ಮಾಡಿಕೊಂಡಿರಬಾರದು? ಮೊದಲು ಅವಳ ಸಾವು ಆತ್ಮಹತ್ಯೆಯೋ, ಕೊಲೆಯೋ ಅಂತ ನೋಡಿ...’ ಎಂದ ಡಿಮೆಲೋ.

ಕೊಟ್ಟು ಕೆಲಸ ಮಾಡಿಸಿದ್ದಾರೆ ಅಂದರೆ, ಇಷ್ಟು ಕರಾರುವಾಕ್ಕಾಗಿ ಅಪರಾಧ ಮಾಡಿ ಹೋಗುವವರು ಯಾರೂ ಇಲ್ಲ. ಆದ್ದರಿಂದ ಯಾವ ತರ್ಕವೂ ಬಿಜು ಮೇಲೆ ಮಾಡಿದ್ದಾನೆ ಎನ್ನುವುದಕ್ಕೆ ಪುಷ್ಟಿ ಕೊಡುತ್ತಿಲ್ಲ. ನಾವು ಲೂಸಿಯ ಆಂಗಲ್‌ನಿಂದ ಯಾಕೆ ನೋಡಬಾರದು? ಅವಳೇ ಏನಾದರೂ ಬಿಜುನ ಸಿಗಿಸುವುದಕ್ಕೆ ಮಾಡಿಕೊಂಡಿರಬಹುದಾ?”

ಅವರ ಮಾತುಗಳು ಇನ್ನೂ ಮುಗಿದಿರಲಿಲ್ಲ... ಸಿಂಥಿಯಾ ಕ್ಯಾಬಿನ್‌ನ ಬಾಗಿಲು ತಳ್ಳಿಕೊಂಡು ಒಳನುಗ್ಗಿದಳು. ಕೋಪದಿಂದ ಅವಳ ಮುಖ ಕೆಂಪಾಗಿತ್ತು. ಅವಳು ಬಂದ ರಭಸಕ್ಕೆ ರುದ್ರೇಶ್ ತಬ್ಬಿಬ್ಬಾದ.

“ಯಾರ್ರೀ ಅದು, ನನ್ನ ಮನೆಯ ಸುತ್ತ ಮುತ್ತ ಎಲ್ಲರನ್ನೂ ವಿಚಾರಿಸುತ್ತಿದ್ದವರು? ನಿಮಗೆ ಏನು ಬೇಕೋ ಎಲ್ಲಿಗೆ ಬೇಕೋ ನನ್ನನ್ನೇ ಕರೆದು ವಿಚಾರಿಸಿ. ನಿಮ್ಮ ಬಳಿ ನಾನು ತಪ್ಪು ಮಾಡಿದ ಸಾಕ್ಷ್ಯಗಳು ಇದ್ದರೆ ನನ್ನನ್ನು ಅರೆಸ್ಟ್ ಮಾಡಿ. ಅದರ ಬದಲು ಯಾರೋ ಲೋಫರ್ ಥರಾ ಇರೋನು ಬಂದು, ಅಲ್ಲಿ ಇಲ್ಲಿ ನನ್ನ ಬಗ್ಗೆ ವಿಚಾರಿಸಿದರೆ, ನನ್ನ ಬಗ್ಗೆ ಜನ ಏನು ತಿಳಿದುಕೊಳ್ಳುತ್ತಾರೆ ಗೊತ್ತಾ?”

ರುದ್ರೇಶ್‌ನ ಅಪ್ಪಣೆ ಸಹಿತ ಕೇಳದೇ ಧಡಕ್ಕನೆ ಎದುರಿಗಿದ್ದ ಕುರ್ಚಿಯಲ್ಲಿ ಕುಳಿತು, ನೀರಿನ ಲೋಟ ಎತ್ತಿ ಪೂರ್ತಿ ಒಂದೇ ಗುಟುಕಿನಲ್ಲಿ ಕುಡಿದು ಏದುರಿಸಿರು ಬಿಟ್ಟಳು.

ಅವಳ ಹಿಂದೆ ಒಬ್ಬ ಮಾಹಿತಿದಾರನನ್ನು ಹಾಕಿದ್ದ. ಅವನು ಎಲ್ಲಾ ಕೆಲಸ ಕೆಡಿಸಿದ್ದ!

“ನಮ್ಮ ಕೆಲಸ ನಾವು ಮಾಡಬೇಕು. ಇದು ಕೊಲೆ ಕೇಸ್, ಎಲ್ಲರನ್ನೂ ಅನುಮಾನದ ದೃಷ್ಟಿಯಿಂದಲೇ ನೋಡಬೇಕು... ಅದೆಲ್ಲಾ ಇರಲಿ, ಲೂಸಿ ಸಾಯುವ ಹಿಂದಿನ ದಿನ ಸುಮಾರು ಅರ್ಧಗಂಟೆ ನಿಮ್ಮ ಹತ್ತಿರ ಮಾತಾಡಿದ್ದಾರೆ. ಇಲ್ಲ ಅನ್ನಬೇಡಿ, ಎಲ್ಲಾ ರೆಕಾರ್ಡ್ ಇದೆ.”

“ಆ ಜಗಳಗಂಟಿ ಒಂದೆರಡು ನಿಮಿಷದಲ್ಲಿ ಮಾತು ಮುಗಿಸುವವಳಲ್ಲ. ಮತ್ತೆ ಅದೇ ಕತೆ. ನನ್ನ ಮತ್ತು ಬಿಜು ಸಂಬಂಧದ ಬಗ್ಗೆ.”

“ನಿಮ್ಮಿಬ್ಬರ ಸಂಬಂಧ ಇನ್ನೂ ಮುಂದುವರೆದಿದೆಯಾ?” ಗಂಭೀರವಾಗಿ ಪ್ರಶ್ನಿಸಿದ ರುದ್ರೇಶ್.

ಒಂದುಕ್ಷಣ ತಬ್ಬಿಬ್ಬಾದಳು ಸಿಂಥಿಯಾ. ಹೌದು ಎನ್ನುವಂತಿಲ್ಲ... ಇಲ್ಲ ಅಂತಲೂ ಅನ್ನುವಂತಿಲ್ಲ!!

“ಅದೆಲ್ಲಾ ಹಳೆಯ ಕತೆ. ಆದರೆ ಆ ಅಪ್ಪ ಮಗಳು ದೊಡ್ಡ ವಂಚಕರು. ನನಗೆ ಬಾಡಿಗೆ ತಾಯಿ ಆಗುವಂತೆ ಮನವೊಲಿಸಿದರು. ನನಗೆ ಹತ್ತು ಲಕ್ಷ ಕೊಡುತ್ತೇವೆ ಅಂತ ಪ್ರಾಮಿಸ್ ಮಾಡಿದ್ದರು. ಅವರ ಮಾತಿಗೆ ಮರುಳಾಗಿ ನಾನು ಒಪ್ಪಿದ್ದೆ. ಆದರೆ ಮೂರುಬಾರಿ ಐವಿಎಫ್ ವಿಫಲವಾಯ್ತು. ನನ್ನ ಒಂದು ವರ್ಷ ಹಾಳಾಯಿತು. ನನ್ನ ಆರೋಗ್ಯ ಎಲ್ಲಾ ಹದಗೆಟ್ಟಿತು. ಹೋಗಲಿ ಅರ್ಧ ದುಡ್ಡಾದರೂ ಕೊಡಿ ಅಂತ ಕೇಳಿದರೆ, ನೀನು ತಾಯಿಯಾಗಿದ್ದರೆ ಮಾತ್ರ ದುಡ್ಡು. ಆಗಲಿಲ್ಲ ಅಂದರೆ ಅದಕ್ಕೆ